SI.A.No. 80/2021

RW-1,

ದಿನಾಂಕಃ 17-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಅರ್ಜಿದಾರರ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದ ಃ

ಅರ್ಜಿದಾರರು ನನಗೆ 2 ಚಾರ್ಜ್ ಶೀಟ್ ಗಳನ್ನು ಅಂದರೆ GA/Adm& HR/2019-20/1424 dt 06.05.2019 ಮತ್ತು GA/Adm& HR/2019-20/1425 dt 06.05.2019 ಗಳನ್ನು ನೀಡಿರುತ್ತಾರೆ ಎಂದರೆ ಸರಿ . ಚಾರ್ಜ್ ಶೀಟ್ ನಂ. 1424 ರ ವಿಚಾರಣೆಯನ್ನು ದಿನಾಂಕ 31.08.2019 ಕ್ಕೆ ಪ್ರಾರಂಭಿಸಿ 09.04.2021 ಕ್ಕೆ ಮುಗಿಸಿರುತ್ತಾರೆ ಎಂದರೆ ಸರಿ . ಸದರಿ ವಿಚಾರಣೆಯಲ್ಲಿ ದಿ 07.09.2019 ರಲ್ಲಿ ಸಹ ಕಾರ್ಮಿಕರನ್ನು ಸಹಾಯಕ್ಕೆಂದು ಬರಲು ಸಮಯವನ್ನು ಕೋರಿರುತ್ತೇನೆ ಎಂದರೆ ಸರಿ . ದಿ. 27.11.2019 ರಂದು ಆಡಳಿತ ವರ್ಗ ದವರು ಸಾಕ್ಷಿ ಪಟ್ಟಿಯನ್ನು ನೀಡಿರುತ್ತಾರೆ ಹಾಗೂ ಸದರಿ ದಿನದಂದು ನಾನು ಸಹ ಕಾರ್ಮಿಕರಾದ ಕಿರಣ್ ರವರ ಸಹಾಯವನ್ನು ಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ಸದರಿ ದಿನದಂದು 32 ದಾಖಲಾತಿಗಳನ್ನು ಹಾಜರು ಪಡಿಸಿ ಅವುಗಳನ್ನು ಗುರುತುವಿಕೆಗೆ ಒಳಪಡಿಸಿರುತ್ತಾರೆ ಎಂದರೆ ಸರಿ. ಆಡಳಿತ ವರ್ಗ ದವರು ತಮ್ಮ ಪರ 14 ಜನರ ಸಾಕ್ಷಿ ವಿಚಾರಣೆಯನ್ನು ಮಾಡಿರುತ್ತಾರೆ ಎಂದರೆ ಸರಿ . ಸದರಿ ಸಾಕ್ಷಿಗಳ ಪಾಟೀ ಸವಾಲನ್ನು ನೀವು ಮಾಡಿರುತ್ತೀರಿ ಎಂಬ ಸೂಚನೆಗೆ ಸಾಕ್ಷಿದಾರರು 13 ಜನ ಸಾಕ್ಷಿದಾರರ ಪಾಟೀ ಸವಾಲನ್ನು ಮಾಡಿರುತ್ತೇನೆ ಇನ್ನು 2 ಸಾಕ್ಷಿಗಳಾದ ಪ್ರಕಾಶ್ ಮತ್ತು ಚೇತನ್ ಸಿ ರವರ ಪಾಟೀ ಸವಾಲನ್ನು ಮಾಡಲು ಸಮಾಯಾವಾಕಾಶವನ್ನು ಕೋರಿದ್ದು ವಿಚಾರಣಾಧಿಕಾರಿಗಳು ಸಮಯವನ್ನು ನೀಡಿರುವುದಿಲ್ಲ. ಸದರಿ 2 ಸಾಕ್ಷಿಗಳ ಪಾಟೀ ಸವಾಲನ್ನು ಮಾಡಲು ವಿಚಾರಣಾಧಿಕಾರಿಗಳು ಸಮಯವನ್ನು ಕೊಟ್ಟಿದ್ದರು ಅದನ್ನು ಉಪಯೋಗಿಸಿಕೊಳ್ಳದೇ ಸಮಯವನ್ನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನನ್ನು ಮತ್ತು ಸಾಕ್ಷಿದಾರರಾದ ಕಿರಣ್ ನ್ನು ನನ್ನ ಸಾಕ್ಷ್ಯ ವಿಚಾರಣೆಯಲ್ಲಿ ವಿಚಾರಣೆಗೆ ಒಳಪಡಿಸಿರುತ್ತೇನೆ ಎಂದರೆ ಸರಿ . ನನ್ನ ವಿಚಾರಣಾ ಕಾಲಕ್ಕೆ ಸುಮಾರು 40 ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ . ವಿಚಾರಣೆ ಆದ ನಂತರ ನಿಮ್ಮ ಮತ್ತು ಆಡಳಿತ ವರ್ಗ ದವರು ಲಿಖಿತ ಹೇಳಿಕೆಗಳನ್ನು ವಿಚಾರಣಾಧಿಕಾರಿಗಳು ಪಡೆದುಕೊಂಡಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿದಾರರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಆದರೆ ಆಡಳಿತ ವರ್ಗದವರು ಹೇಳಿಕೆಯನ್ನು ಪಡೆದುಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆಡಳಿತ ವರ್ಗದವರ ಲಿಖಿತ ಹೇಳಿಕೆಯ ಪ್ರತಿಯನ್ನು ನನಗೆ ನೀಡಿದ್ದರೂ ಸಹ ಸದರಿ ಪ್ರತಿಯನ್ನು ನನಗೆ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿದಾರರಾದ ಸುರೇಶ್ ಅವರು ವಿಚಾರಣೆಯನ್ನು ಮಾಡಲು ವಿಚಾರಣಾಧಿಕಾರಿ ಗಳು ನನಗೆ ಅವಕಾಶವನ್ನು ನೀಡಿದ್ದರೂ ಸಹ ಅವರ ವಿಚಾರಣೆಯನ್ನು ಮಾಡುವುದಿಲ್ಲ ಎಂದು ತಿಳಿಸಿರುತ್ತೇನೆ ಎಂದರೆ ಸರಿ .

ಪ್ರತಿ ವಿಚಾರಣಾ ದಿನಾಂಕದಂದು ವಿಚಾರಣಾಧಿಕಾರಿ ಗಳು ನನ್ನ ಸಹಿಯನ್ನು ದೈನಂದಿನ ದಿನಚರಿಯಲ್ಲಿ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿ . ವಿಚಾರಣಾ ಕಾಲಕ್ಕೆ ವಿಚಾರಣಾಧಿಕಾರಿಗಳು ನನಗೆ ಎಲ್ಲಾ ಅವಕಾಶಗಳನ್ನು ನೀಡಿದ್ದು ಅದರ ಸದುಪಯೋಗ ಪಡಿಸಿಕೊಂಡಿರುತ್ತೇನ ಎಂದರೆ ಸರಿಯಲ್ಲ . ವಿಚಾರಣಾ ಕಾಲಕ್ಕೆ ವಿಚಾರಣಾಧಿಕಾರಿ ಗಳ ವಿರುದ್ಧ ಮತ್ತು ಅವರು ನಡೆಸುತ್ತಿದ್ದಂತಹ ವಿಚಾರಣೆಯ ಬಗ್ಗೆ ಯಾವುದೇ ವಿರೋಧವನ್ನು ನಾನು ವ್ಯಕ್ತಪಡಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಇಬ್ಬರು ಸಾಕ್ಷಿದಾರರ ಪಾಟೀ ಸವಾಲನ್ನು ಮಾಡಲು ಅವಕಾಶ ನೀಡದೇ ಇರುವುದನ್ನು ಮತ್ತು ಕೆಲವೊಂದು ದಾಖಲಾತಿಗಳನ್ನು ನೀಡದೇ ಇರುವುದನ್ನು ಹೊರತುಪಡಿಸಿ ಬೇರೆ ಎಲ್ಲಾ ಅವಕಾಶವನ್ನು ನೀಡಿರುತ್ತಾರೆರೆ ಎಂದು ನುಡಿಯುತ್ತಾರೆ . ಸದರಿ ಎರಡು ಸಾಕ್ಷಿದಾರರ ಪಾಟೀ ಸವಾಲು ಮಾಡಲು ಅವಕಾಶವನ್ನು ಕೊಟ್ಟಿದ್ದರೂ ಸಹ ನೀವು ಅವರ ಪಾಟೀ ಸವಾಲನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಇನ್ನೂ ಹೆಚ್ಚು ಕಾಲಾವಕಾಶ ಬೇಕಿತ್ತು ಎಂದು ನುಡಿಯುತ್ತಾರೆ . ವಿಚಾರಣಾಧಿಕಾರಿಗಳು ಎಲ್ಲಾ ದಾಖಲಾತಿಗಳನ್ನು ವೀಕ್ಷಿಸಲು ನಿಮಗೆ ಅವಕಾಶವನ್ನು ಕೊಟ್ಟಿದ್ದು ಕೆಲವೊಂದು ದಾಖಲಾತಿಗಳ ಪ್ರತಿಯನ್ನು ಕೂಡ ಕೊಟ್ಟಿರುತ್ತಾರೆ ಎಂದರೆ ಸರಿ . ಇಬ್ಬರು ಸಾಕ್ಷಿದಾರರ ಪಾಟೀ ಸವಾಲು ಮಾಡಲು ತುಂಬಾ ಸಮಾಯಾವಕಾಶವನ್ನು ಕೇಳಿದ್ದು ಸದರಿ ಸಮಾಯವಾಕಾಶಕ್ಕೆ ಯಾವುದೇ ಸ್ಪಷ್ಟೀಕರಣ ನೀಡದೇ ಇದ್ದುದರಿಂದ ವಿಚಾರಣಾಧಿಕಾರಿ ಗಳು ಪಾಟೀ ಸವಾಲು ಮಾಡಲು ಕಾಲಾವಾಕಾಶವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಚಾರ್ಜ್ ನಂ. 1424 ವಿಚಾರಣಾ ಕಾಲಕ್ಕೆ ವಿಚಾರಣಾಧಿಕಾರಿಗಳು ಎಲ್ಲಾ ರೀತಿಯ ದಾಖಲಾತಿ ಮತ್ತು ಕಾಲಾವಾಕಾಶವನ್ನು ನೀಡಿ ಕಾನೂನು ಬದ್ಧವಾಗಿ ವಿಚಾರಣೆಯನ್ನು ನಡೆಸಿರುತ್ತಾರೆ ಎಂದರೆ ಸರಿಯಲ್ಲ .

ಚಾರ್ಜ್ ಶೀಟ್ ನಂ. 1425 ರ ವಿಚಾರಣೆಯನ್ನು ದಿನಾಂಕ 31.08.2019 ಕ್ಕೆ ಪ್ರಾರಂಭಿಸಿ 05.11.2021 ಕ್ಕೆ ಮುಗಿಸಿರುತ್ತಾರೆ ಎಂದರೆ ಸರಿ . ಭೂಪಾಲ್ ಕೃಷ್ಣ ಅರಸ್ ರವರು ಆಡಳಿತ ವರ್ಗ ದವರ ಪ್ರತಿನಿಧಿಯಾಗಿ ನೇಮಕಗೊಂಡಿರುತ್ತಾರೆ ಎಂದರೆ ಸರಿ . ದಿನಾಂಕ 31.08.2019 ಕ್ಕೆ ವಿಚಾರಣೆ ಪ್ರಾರಂಭವಾದಾಗ ವಿಚಾರಣಾಧಿಕಾರಿ ಗಳು ವಿಚಾರಣಾ ವಿಧಿ ವಿಧಾನಗಳನ್ನು ತಿಳಿಸಿ ಯಾವ ಭಾಷೆಯಲ್ಲಿ ವಿಚಾರಣೆಯನ್ನು ನಡೆಸಬೇಕು ಎಂದು ಕೇಳಿದಾಗ ನಾನು ಕನ್ನಡ ಎಂದು ಹೇಳಿದ್ದರಿಂದ ವಿಚಾರಣೆಯನ್ನು ಕನ್ನಡದಲ್ಲಿ ಪ್ರಾರಂಭಿಸಿದರು ಎಂದರೆ ಸರಿ . ಸದರಿ ವಿಚಾರಣೆಯಲ್ಲಿ ನಾನು ಸಹ ಕಾರ್ಮಿಕರಾದ ಕಿರಣ್ ರವರ ಸಹಾಯವನ್ನುಪಡೆದುಕೊಂಡಿರುತ್ತೇನೆ ಎಂದರೆ ಸರಿ . ಈ ವಿಚಾರಣೆಯಲ್ಲಿ ಆಡಳಿತ ವರ್ಗ ದವರ ಪರ ಸಾಕ್ಷಿದಾರರ ಪಾಟೀ ಸವಾಲನ್ನು ಮಾಡಲು ನಿಮಗೆ ಎಲ್ಲಾ ಅವಕಾಶಗಳನ್ನು ನೀಡಲಾಗಿರುತ್ತದೆ ಎಂಬ ಸೂಚನೆಗೆ ಸಾಕ್ಷಿದಾರರ ಆದರೆ ಮಹದೇವಸ್ವಾಮಿ ಎಂಬುವವರು ಹೆಚ್ಚಿನ ವಿಚಾರಣೆಯನ್ನು ಮಾಡಲು ಅವಕಾಶವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ .

ಆಡಳಿತದವರು ಹಾಜರುಪಡಿಸಿದ ದಾಖಲಾತಿಗಳಲ್ಲಿ ಒಂದು ಸಿ ಡಿ ಕೂಡ ಇತ್ತು ಎಂದರೆ ಸರಿ . ಸದರಿ ಸಿ ಡಿ ಯನ್ನು ಕಂಪ್ಯೂಟರ್ ನಲ್ಲಿ ನೋಡಲು ಅವಕಾಶವನ್ನು ಕಲ್ಪಿಸಿ ಕೊಟ್ಟು ಉಳಿದ ದಾಖಲಾತಿಗಳ ಪ್ರತಿಯನ್ನು ನಿಮಗೆ ನೀಡಿರುತ್ತಾರೆ ಎಂದರೆ ಸರಿ . ಸಿ ಡಿ ಯನ್ನು ಹಾಜರುಪಡಿಸಿದ ಮಹದೇವಸ್ವಾಮಿ ಯವರ ವಿಚಾರಣೆಯನ್ನು ಒಂದು ದಿನ ಮಾಡಿರುತ್ತೇನೆ.

ದಿ 24.02.2020 ಆದರ್ಶ್ ಮತ್ತು 25.02.2020 ಮಹದೇವಸ್ವಾಮಿಯವರು ಪಾಟೀ ಸವಾಲನ್ನು ಮಾಡಿರುತ್ತೇನೆ ಎಂದರೆ ಸರಿ . ಇದಾದ ನಂತರ ದಿನಾಂಕ 04.08.2020, 12.08.2020, 18.08.2020, 21.08.2020, 24.08.2020, 03.09.2020 ದಿನಗಳಲ್ಲಿ ಮಹದೇವಸ್ವಾಮಿಯವರು ಪಾಟೀ ಸವಾಲನ್ನು ಮಾಡಲು ಅವಕಾಶವನ್ನು ನೀಡಿದ್ದರು ಸಹ ನಾನು ಅದನ್ನು ಉಪಯೋಗಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ವಿಚಾರಣಾಧಿಕಾರಿಗಳು ನನ್ನ ಪರವಾಗಿ ಸಾಕ್ಷಿದಾರರ ವಿಚಾರಣೆಯನ್ನು ಮಾಡಲು ಹಾಗೂ ದಾಖಲಾತಿಗಳನ್ನು ಹಾಜರುಪಡಿಸಲು ಅವಕಾಶವನ್ನು ನೀಡಿರುತ್ತಾರೆ ಎಂದರೆ ಸರಿ . ಅದೇ ರೀತಿ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ್ದು ನಾನು 10 ಪುಟದ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ವಿಚಾರಣೆ ನಡೆಸಿದ ದಿನಗಳಂದು ವಿಚಾರಣಾಧಿಕಾರಿಗಳು ವಿಚಾರಣೆಯ ಪ್ರತಿಯನ್ನು ನೀಡುತ್ತಿದ್ದರು ಎಂದರೆ ಸರಿ . ವಿಚಾರಣಾಧಿಕಾರಿಗಳು ನನಗೆ ಸಾಕಷ್ಟು ಅವಕಾಶವನ್ನು ನೀಡಿದ್ದು ಅದನ್ನು ಉಪಯೋಗಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ . ಚಾರ್ಜ್ ನಂ. 1425 ವಿಚಾರಣಾ ಕಾಲಕ್ಕೆ ವಿಚಾರಣಾಧಿಕಾರಿಗಳು ಎಲ್ಲಾ ರೀತಿಯ ದಾಖಲಾತಿ ಮತ್ತು ಕಾಲಾವಾಕಾಶವನ್ನು ನೀಡಿ ಕಾನೂನು ಬದ್ದವಾಗಿ ವಿಚಾರಣೆಯನ್ನು ನಡೆಸಿರುತ್ತಾರೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.